**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಮಾನ್ಯ ಸಭಾಧ್ಯಕ್ಷರ ಕಾರ್ಯಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ     ದಿನಾಂಕ : DATE : 13/03/2020

vishwavani.news

### ರಮೇಶ್‌ಕುಮಾರ್ ತೀರ್ಪು ಪೂರ್ವಾಗ್ರಹ ಪೀಡಿತ: ಸುಧಾಕರ್ | ಮೇಜು ತಟ್ಟಿದ ಬಿಜೆಪಿ ಸದಸ್ಯರು | ಕಾಂಗ್ರೆಸ್ ಆಕ್ಷೇಪ

# ವಿಷಾದದೊಂದಿಗೆ ಹಕ್ಕುಚ್ಯುತಿ ವಿವಾದ ಅಂತ್ಯ

13-3-20

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

ಕಳೆದ ಮೂರು ದಿನಗಳಿಂದ ಹಕ್ಕುಚ್ಯುತಿ ವಿಚಾರವಾಗಿ ಆಡಳಿತ-ಪ್ರತಿಪಕ್ಷದ ನಡುವೆ ನಡೆದಿದ್ದ ಭಾರಿ ವಾಗ್ವಾದದ ಬಳಿಕ 'ವಿಷಾದ' ವ್ಯಕ್ತಪಡಿಸುವ ಮೂಲಕ ಹಕ್ಕುಚ್ಯುತಿ ಗಲಾಟೆಗೆ ಇತಿಶ್ರೀ ಹಾಡಲಾಗಿದೆ.

ಸಂವಿಧಾನದ ವಿಶೇಷ ಚರ್ಚೆಯಲ್ಲಿ ಮಾತನಾಡುವಾಗ ಸುಧಾಕರ್ ಅವರು ರಮೇಶ್‌ಕುಮಾರ್ ವಿರುದ್ಧ ಮಾತನಾಡುತ್ತಾ ಸಾಂವಿಧಾನಿಕ ಪೀಠವಾಗಿರುವ ವಿಧಾನಸಭಾಧ್ಯಕ್ಷರ ಸ್ಥಾನಕ್ಕೆ ಅಗೌರವ ತೋರಿದ್ದಾರೆ. ಇದು ಸದನದ ಹಕ್ಕುಚ್ಯುತಿಯಾಗಿದೆ ಎಂದು ಕಾಂಗ್ರೆಸ್, ಸುಧಾಕರ್ ವಿರುದ್ಧ ರಮೇಶ್‌ಕುಮಾರ್ ಅವಾಚ್ಯ ಶಬ್ದ ಬಳಸಿದ್ದಾರೆ ಎಂದು ಬಿಜೆಪಿ ನಾಯಕರು ಕಳೆದ ಮೂರು ದಿನಗಳಿಂದ ವಿಧಾನಸಭೆಯಲ್ಲಿ ನಡೆಸಿದ್ದ ಭಾರಿ ಗದ್ದಲ ಗುರುವಾರ ಕೊನೆಯಾಗಿದ್ದು, ಸದನದಲ್ಲಿ ಮಂಡನೆಯಾಗಿದ್ದ ಮೂರು ಹಕ್ಕುಚ್ಯುತಿ ಪ್ರಸ್ತಾಪಗಳನ್ನು ಸ್ಪೀಕರ್ ಕಾಗೇರಿ ಅವರು ಕೈಬಿಟ್ಟಿದ್ದಾರೆ.

ಗುರುವಾರ ಸದನ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಪ್ರಸ್ತಾವವನ್ನು ಸಲ್ಲಿಸಿದರು. ಈ ವೇಳೆ ಸ್ಪೀಕರ್ ಸ್ಥಾನವೆನ್ನುವುದು ನ್ಯಾಯಾಧೀಶರ ಸ್ಥಾನವಿದ್ದಂತೆ. 17 ಶಾಸಕರು ರಾಜೀನಾಮೆ ನೀಡಿದ ಕೂಡಲೇ ಅದನ್ನು ಒಪ್ಪಬೇಕು ಎಂದಿಲ್ಲ. ಒಂದು ವೇಳೆ ಶಾಸಕರ ರಾಜೀನಾಮೆ ಹಿಂದೆ ಪಕ್ಷಾಂತರದ ವಾಸನೆಯಿದ್ದರೆ ಅವರು ಅದನ್ನು ತಿರಸ್ಕರಿಸಬಹುದು ಅಥವಾ ಶಾಸಕರನ್ನು ಪಕ್ಷಾಂತರ ಕಾಯಿದೆ ಅನ್ವಯ ಉಚ್ಚಾಟಿಸಬಹುದು. ಅದೇ ಕೆಲಸವನ್ನು ಅಂದು ಪೀಠದಲ್ಲಿದ್ದ ರಮೇಶ್‌ಕುಮಾರ್ ಅವರು ಮಾಡಿದ್ದಾರೆ. ಆದರೆ ಅದನ್ನು ಈಗ 'ಷಡ್ಯಂತ್ರ'ವೆಂದು ವಿಶ್ಲೇಷಣೆ ಮಾಡುವುದು ಖಂಡನೀಯ. ಇದು ಕೇವಲ ರಮೇಶ್ ಕುಮಾರ್ ಗೌರವದ ಪ್ರಶ್ನೆಯಲ್ಲ, ಇಡೀ ಸದನದ, ವಿಧಾನಸಭಾಧ್ಯಕ್ಷ ಸ್ಥಾನದ ಪಾವಿತ್ರ್ಯತೆಯ ಪ್ರಶ್ನೆ ಎಂದು ವಾದ ಮಂಡಿಸಿ, ಸುಧಾಕರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.



## ವಿವೇಚನೆ ಅನ್ವಯ ತೀರ್ಮಾನ ಮಾಡಿದ್ದೇನೆ

**ಸುಧಾಕರ್ ಅವರ ಮಾತಿನ ಬಳಿಕ ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಮಾತನಾಡಿ, ನಾನು ನನ್ನ ವಿವೇಚನೆಯ ಪ್ರಕಾರ ತೀರ್ಮಾನ ಮಾಡಿದ್ದೇನೆ. ನನ್ನ ತೀರ್ಮಾನವನ್ನು ನ್ಯಾಯಾಲಯ ಎತ್ತಿಹಿಡಿದಿದೆ. ಅದೇ ರೀತಿ ನನ್ನ ತೀರ್ಮಾನದ ಬಗ್ಗೆ ಕೆಲವು ವ್ಯಾಖ್ಯಾನಗಳನ್ನು ಮಾಡಿದೆ. ನಾನು ಸಚಿವ ಸುಧಾಕರ್ ಅವರಿಗೆ ನೋವು ಉಂಟು ಮಾಡುವ ರೀತಿಯಲ್ಲಿ ಮಾತನಾಡಿಲ್ಲ, ಅಸಂಸದೀಯ ಪದ ಬಳಸಿಲ್ಲ, ಆದರೂ ನನ್ನಿಂದ ಅವರಿಗೆ ನೋವಾಗಿದ್ದರೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಇದರಿಂದ ನನ್ನ ಕೀರ್ತಿ ಮತ್ತು ಘನತೆ ಕಡಿಮೆಯಾಗುವುದಿಲ್ಲ ಎಂದರು.**

> **ಎರಡೂ ಕಡೆಯವರು ವಿಷಾದ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಇದನ್ನು ಮುಂದುವರಿಸುವುದಕ್ಕೆ ಅವಕಾಶವಿಲ್ಲ. ಹೊಸ ಸಂಪ್ರದಾಯ ಹುಟ್ಟುಹಾಕುವುದು ಒಳ್ಳೆಯ ಲಕ್ಷಣವಲ್ಲ. ಆದ್ದರಿಂದ ಇದನ್ನು ಇಲ್ಲಿಗೇ ಕೈ ಬಿಡಬೇಕು.**
>
> **- ಜೆ.ಸಿ ಮಾಧುಸ್ವಾಮಿ**
> ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

**ದುಡ್ಡು ಪಡೆದಿದ್ದರೆ ನೇಣಿಗೆ ಹಾಕಲಿ:** ಇನ್ನು ಸಿದ್ದರಾಮಯ್ಯ ಅವರು ವಿಷಯ ಮಂಡಿಸಿದ ಬಳಿಕ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಅವರಿಗೆ ರಮೇಶ್ ಕುಮಾರ್ ವಿರುದ್ಧ ಸಲ್ಲಿಸಿದ ಹಕ್ಕುಚ್ಯುತಿ ಮಂಡನೆ ಹಾಗೂ ಸಿದ್ದರಾಮಯ್ಯ ಅವರ ವಾದಕ್ಕೆ ಪ್ರತಿವಾದ ಮಾಡಲು ಅವಕಾಶ ನೀಡಿದರು. ಈ ವೇಳೆ ಮಾತನಾಡಿದ ಅವರು, ಅನೇಕ ಸಮಯದಲ್ಲಿ ರಮೇಶ್ ಕುಮಾರ್ ಸೇರಿದಂತೆ ಕಾಂಗ್ರೆಸ್, ಜೆಡಿಎಸ್‌ನವರು ನಾವು ದುಡ್ಡು ಪಡೆದು ಪಕ್ಷಾಂತರ ಮಾಡಿದ್ದೇವೆ ಎನ್ನುವ ಅರ್ಥದಲ್ಲಿ ಮಾತನಾಡಿದ್ದಾರೆ, ಇದರೊಂದಿಗೆ ನಮಗೆ 'ಅನರ್ಹ' ಶಾಸಕರು ಎನ್ನುವ ಹಣೆಪಟ್ಟಿ ಕಟ್ಟಿ ಸುಮಾರು ತಿಂಗಳು ಅಜ್ಞಾತವಾಸದಲ್ಲಿರುವಂತೆ ಮಾಡಿದರು. ನಾವು ರಾಜೀನಾಮೆ ನೀಡಿದ್ದು ಹೋರಾಟಕ್ಕೆ ಹೊರೆತು ಹಣಕ್ಕಾಗಿ ಅಲ್ಲ. ಒಂದು ವೇಳೆ ನಾವು ಹಣಕ್ಕೆ ರಾಜೀನಾಮೆ ನೀಡಿರುವುದು ಸಾಕ್ಷಿ ಕೊಟ್ಟರೆ, ಸಾರ್ವಜನಿಕ ಸ್ಥಳದಲ್ಲಿ ನಮ್ಮನ್ನು ನೇಣಿಗೆ ಹಾಕಲಿ ಎಂದು ಸವಾಲು ಹಾಕಿದರು.

ಹಿಂದಿನ ಸ್ಪೀಕರ್ ಕೆ.ಆರ್ ರಮೇಶ್ ಕುಮಾರ್ ಪಕ್ಷಪಾತದಿಂದ ಹಾಗೂ ರಾಜಕೀಯ ದುರುದ್ದೇಶದಿಂದ ನಮ್ಮ 17 ಶಾಸಕರನ್ನು ಅನರ್ಹಗೊಳಿಸಿದ್ದಾರೆ. ಇದರ ಹಿಂದೆ ರಾಜಕೀಯ ದುರುದ್ದೇಶ, ಸ್ವಜನ ಪಕ್ಷಪಾತವಿದೆ ಎಂಬುದು ಸುಪ್ರೀಂ ಕೋರ್ಟ್‌ನ ತೀರ್ಮಾನಗಳಿಂದ ಸ್ಪಷ್ಟವಾಗಿದೆ ಎಂದು ಎಳೆಎಳೆಯಾಗಿ ಕೋರ್ಟ್ ಮಾಡಿರುವ ಅಭಿಪ್ರಾಯಗಳನ್ನು ಎಲ್ಲಾ ಸದಸ್ಯರ ಮನಮುಟ್ಟುವಂತೆ ವಿವರಿಸಿದರು.

ಇನ್ನು ತಮ್ಮ ಭಾಷಣದಲ್ಲಿ ಸುಧಾಕರ್ ಅವರು 17 ಶಾಸಕರು ಮುಂಬೈನಲ್ಲಿರುವಾಗ ಸದನ ನಡೆಸಿದ ರೀತಿ, ಈ ವೇಳೆ ರಮೇಶ್‌ಕುಮಾರ್ ಅವರು ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ, 'ನೀವು ಸಾಕಿದ ಗಿಣಿ, ನಿಮಗೆ ಕುಕ್ಕಿದವು' ಎನ್ನುವ ಮಾತು ಸೇರಿದಂತೆ ಹಲವು ಮಾತಗಳನ್ನು ಪ್ರಸ್ತಾಪ ಮಾಡಿದರು. ಈ ಮಾತಗಳನ್ನು ಹೇಳಿ, ರಮೇಶ್‌ಕುಮಾರ್ ಸ್ಪೀಕರ್ ಸ್ಥಾನ ಮೀರಿ ಸ್ವಜನಪಕ್ಷಪಾತ ಮಾಡಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಬಿಜೆಪಿಯ ಶಾಸಕರು ಮೇಜುಕುಟ್ಟಿ ಸ್ವಾಗತಿಸಿದರು.

ಪಕ್ಷಕ್ಕೆ ಅನುಕೂಲಕ್ಕಾಗಿ ರಾಜಕೀಯ ತೀರ್ಮಾನ ಮಾಡಿ ನಮಗೆ ನೋವು ಕೊಟ್ಟರೆ ನಾವು ಎಲ್ಲಿಗೆ ಹೋಗಬೇಕು, ಏನು ಮಾಡಬೇಕು, ರಾಜಿನಾಮೆ ಕೊಡುವ ಸ್ವಾತಂತ್ರ್ಯದ ಹಕ್ಕು, ನಮಗೆ ಇಲ್ಲವೇ ಎಂದು ಪ್ರಶ್ನಿಸಿದರು. ಇಂದು, ರಾಜಕೀಯ ಜೀವನದಲ್ಲಿ ಪಕ್ಷಾಂತರ ಹೆಚ್ಚಾಗಲು ಸ್ಪೀಕರ್ ಅವರ ಸ್ವಜನಪಕ್ಷಪಾತ ವರ್ತನೆ ಕಾರಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಶಾಸಕರ ಅನರ್ಹತೆ ಪ್ರಕರಣವನ್ನು ನ್ಯಾಯಾಧೀಶರ ಸಮಿತಿಗೆ ಒಪ್ಪಿಸಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ನಾನು ಸಭಾಧ್ಯಕ್ಷರ ಪೀಠಕ್ಕೆ ಎಂದೂ ಅಗೌರವ ತೋರಿಲ್ಲ, ಮುಂದೆಯೂ ತೋರುವುದಿಲ್ಲ, ಆದರೂ ನನ್ನಿಂದ ಯಾರಿಗಾದರೂ ನೋವಾಗಿದ್ದರೆ ಈ ಪೀಠಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ತಮ್ಮ ಮಾತನ್ನು ಅಂತ್ಯಗೊಳಿಸಿದರು.